# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು-572 103
ದೂರವಾಣಿ : 0816-2254546, 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತು.ವಿ:ಸಾ.ವಿ:ಮ.ವಿ.:ದ.ಆ:2018-19/3546 ದಿನಾಂಕ:08.01.2019

## ದರಪಟ್ಟಿ ಆಹ್ವಾನ

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನ ವಿಭಾಗದ ಪ್ರಯೋಗಾಲಯಕ್ಕೆ ಅಗತ್ಯವಿರುವ ಪರಿಕರ ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಲು ದರಪಟ್ಟಿ ಆಹ್ವಾನಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ :07.01.2018 (ಕಂಡಿಕೆ-27)

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನ ವಿಭಾಗದ ಪ್ರಯೋಗಾಲಯಕ್ಕೆ ಅಗತ್ಯವಿರುವ **ಅನುಬಂಧ-01**ರಲ್ಲಿರುವ ಪರಿಕರಗಳನ್ನು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡುವುದಕ್ಕಾಗಿ ದರಪಟ್ಟಿಗಳನ್ನು ಈ ಕೆಳಕಂಡ ಷರತ್ತುಗೊಳಪಟ್ಟು ಆಹ್ವಾನಿಸಲಾಗಿದೆ.

ಷರತ್ತುಗಳು:

1. ಲಕೋಟೆಯ ಮೇಲೆ ವಿಶ್ವವಿದ್ಯಾನಿಲಯದ **ಸ್ನಾತಕೋತ್ತರ ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನ ವಿಭಾಗದ ಪ್ರಯೋಗಾಲಯಕ್ಕೆ ಅಗತ್ಯವಿರುವ ಪರಿಕರ ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡುವ ಕುರಿತು** ಎಂದು ನಮೂದಿಸತಕ್ಕದ್ದು.
2. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 30 ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.
3. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
4. ಸರಬರಾಜು ಸಂಸ್ಥೆಯವರು ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
5. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ಪಾವತಿಸಲಾಗುವುದು.
6. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ18.01.2019 ಸಂಜೆ 5-30.
7. ದರಪಟ್ಟಿಯನ್ನು ದಿನಾಂಕ: 19.01.2019 ರಂದು ಮಧ್ಯಾಹ್ನ 12-30ಕ್ಕೆ ತೆರೆಯಲಾಗುವುದು. ದರಪಟ್ಟಿಗಳನ್ನು **ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572 103** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ.
8. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
9. ವಿಶ್ವವಿದ್ಯಾನಿಲಯವು ಒಂದು ವೇಳೆ ತಮ್ಮ ದರಪಟ್ಟಿಯನ್ನು ತಾತ್ಕಲಿಕವಾಗಿ ಅಂಗೀಕರಿಸಿದ್ದಲ್ಲಿ ಮಾದರಿ ಪರಿಕರ ಮತ್ತು ಪೀಠೋಪಕರಣಗಳನ್ನು ಪ್ರಚುರಪಡಿಸತಕ್ಕದ್ದು.
10. ತಮ್ಮ ದರಪಟ್ಟಿಯಲ್ಲಿ ಪ್ರತಿ ಸಾಮಗ್ರಿವಾರು ದರಗಳನ್ನು ನಮೂದಿಸುವುದು. (ಎಲ್ಲಾ ತೇರಿಗೆ ಮತ್ತು ಸರಬರಾಜು ವೆಚ್ಚ ಒಳಗೊಂಡಿರತಕ್ಕದ್ದು.)
11. ತಮ್ಮ ಸಂಸ್ಥೆಯು ಸರಬರಾಜುಮಾಡಲು ಉದ್ದೇಶಿಸಿರುವ ಪರಿಕರ ಮತ್ತು ಪೀಠೋಪಕರಣಗಳ ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿ/ಮಾದರಿ ಸಂಖ್ಯೆಗಳನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
12. ಈ ದರಪಟ್ಟಿಯು ರೂಪಾಯಿ ಒಂದು ಲಕ್ಷಕ್ಕೆ ಮೀತಿಗೊಳಪಟ್ಟಿರುತ್ತದೆ.
13. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
14. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಉಪಕುಲಸಚಿವರು, ಖರೀದಿ ಕೋಶ, ಇವರನ್ನು ಸಂಪರ್ಕಿಸಬಹುದು.

08/01

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ರಕ್ಷಣಾ ಪ್ರತಿ.